ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ರಾಜ್ಯೋತ್ಸವ ಸಮಾರೋಪ

ಭಾಷಾ ಸೌಹಾರ್ದದ ಮನೋಭಾವ ಎಲ್ಲೆಡೆ ಬೆಳೆಯಲಿ: ಡಾ. ಎಂ. ಪ್ರಭಾಕರ ಜೋಶಿ

ಶೃಂಗೇರಿ, ನ. ೧೮: ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಶ್ರೀ ಭಾರತೀತೀರ್ಥಶಾಸ್ತ್ರಸಮುತ್ಕರ್ಷ ಕೇಂದ್ರದಲ್ಲಿ ಬುಧವಾರ ಕರ್ನಾಟಕ ರಾಜ್ಯೋತ್ಸವದ ಸಮಾರೋಪ ಸಮಾರಂಭವು ಸಂಪನ್ನವಾಯಿತು. ಮುಖ್ಯ ಅಭ್ಯಾಗತರಾಗಿ ಆಗಮಿಸಿದ್ದ ಡಾ. ಎಂ. ಪ್ರಭಾಕರ ಜೋಶಿಯವರು ಕನ್ನಡ ಭಾಷೆಯ ಉಳಿವು-ಬೆಳವಣಿಗೆಯ ಕುರಿತು ವಿಚಾರ ಮಂಡಿಸಿದರು.

“ಭಾಷೆಗಳಿಗೆ ಲಿಪಿ ಅನಿವಾರ್ಯವಲ್ಲ, ಅದು ಭಾಷೆಯ ಶ್ರೀಮಂತಿಕೆಯ ಸೂಚಕವಲ್ಲ. ಕನ್ನಡ ಭಾಷೆಯ ಬೆಳವಣಿಗೆಗೆ ಸಂಸ್ಕೃತ, ಹಿಂದೀ ಭಾಷೆಗಳು ವಿರೋಧಿಗಳಲ್ಲ” ಎಂದು ಅವರು ಹೇಳಿದರು.

ಮುಂದುವರೆದು ಮಾತನಾಡಿದ ಅವರು, ಕನ್ನಡದ ರಕ್ಷಣೆಗೆ ಪ್ರಾಥಮಿಕ ಶಿಕ್ಷಣವು ಕನ್ನಡ ಮಾಧ್ಯಮದಲ್ಲಿಯೇ ಇರಬೇಕು ಮತ್ತು ಮನೆಗಳಲ್ಲಿ ಮಾತೃಭಾಷೆಯಲ್ಲಿಯೇ ಮಾತನಾಡಬೇಕು ಎಂದು ಹೇಳಿದರು. ತಾಳಮದ್ದಳೆ, ಯಕ್ಷಗಾನ, ಸೋಮನ ಕುಣಿತ, ಗಮಕ ಮೊದಲಾದ ಕರ್ಣಾಟಕದ ಕಲೆಗಳನ್ನು ಹೊಸ ಪೀಳಿಗೆಗೆ ಕಲಿಸುವ, ಪ್ರಚಾರಪಡಿಸುವ ಹಾಗೂ ಕಾಪಾಡುವ ಕಾರ್ಯದಲ್ಲಿ ಸರ್ಕಾರ ವಿಶೇಷ ಶ್ರಮ ವಹಿಸಬೇಕು; ಸರ್ಕಾರದಿಂದ ಅನುದಾನಿತ ಶಾಲೆಗಳ ಗುಣಮಟ್ಟವನ್ನು ಸುಧಾರಿಸಬೇಕು ಹಾಗೂ ಪಾಠ್ಯಕ್ರಮದಲ್ಲಿ ಸಂಸ್ಕೃತ ಭಾಷೆಯನ್ನು ಗಟ್ಟಿಗೊಳಿಸಬೇಕು ಎಂದು ಅವರು ಸೂಚಿಸಿದರು. ಇದರ ಜೊತೆಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳ ಅಭ್ಯಾಸ ಹಾಗೂ ಪರಿಚಯವನ್ನು ಎಲ್ಲರೂ ಪಡೆಯಬೇಕು ಎಂದರು. ಉಡುಪಿ, ಮಂಗಳೂರು ಮುಂತಾದ ಪ್ರದೇಶಗಳಲ್ಲಿ ಕಂಡುಬರುವ ಭಾಷಾ ಸೌಹಾರ್ದದ ಮನೋಭಾವವನ್ನು ಎಲ್ಲಾ ಪ್ರದೇಶಗಳು ಮತ್ತು ರಾಜ್ಯಗಳು ಅನುಸರಿಸಬೇಕು ಎಂದು ಅವರು ಕರೆ ನೀಡಿದರು.

ರಾಜ್ಯೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಪುರಸ್ಕಾರಗಳನ್ನು ನೀಡಲಾಯಿತು. ಆಚಾರ್ಯ ರಾಘವೇಂದ್ರ ಭಟ್ ಸ್ವಾಗತಿಸಿ ಪ್ರಾಸ್ತಾವಿಕ

ನುಡಿಗಳನ್ನಾಡಿದರು. ಆಚಾರ್ಯ ಸುಬ್ರಾಯ ವಿ. ಭಟ್ ಅಧ್ಯಕ್ಷೀಯ ಭಾಷಣ ಮಾಡಿದರು. ಡಾ. ಶ್ರೀಕರ ಜಿ. ಎನ್. ವಂದನಾರ್ಪಣೆ ಮಾಡಿದರು. ಸಂಯೋಜಕಿ ಡಾ. ಎಸ್. ಕವಿತಾ ಕಾರ್ಯಕ್ರಮ ನಿರೂಪಿಸಿದರು. ರಾಜ್ಯೋತ್ಸವದ ಅಂಗವಾಗಿ ಯಕ್ಷಗಾನ ತಾಳಮದ್ದಳೆ ಹಾಗೂ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆದವು.